## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 28-11-2022

### ಚಿಟಗುಪ್ಪಾ ಪೊಲೀ ಠಾಣೆ ಅಪರಾಧ ಸಂಖ್ಯೆ 140/2022 ಕಲಂ 379 ಐಪಿಸಿ ;-

ದಿನಾಂಕ:27/11/2022 ರಂದು 1330 ಗಂಟೆಗೆ ಫಿರ್ಯಾದಿ ಗುರುರಾಜ ತಂದೆ ಜನಾರ್ಧನರಾವ ಕುಲಕರ್ಣಿ, ವಯ: 42 ವರ್ಷ ಸಾ/ ಕೊಡಂಬಲ ತಾ/ ಚಿಟಗುಪ್ಪಾ ರವರು ನೀಡಿದ ದೂರಿನ ಸಾರಾಂಶವೆನೆಂದರೆ, ಇವರ ಹತ್ತಿರವಿರುವ ಹಿರೊ ಪ್ಯಾಶನ ಪ್ರೋ ಮೋಟಾರ ಸೈಕಲ್ ನಂ:KA39Q1076 ನೇದನ್ನು ದಿನಾಂಕ:24/11/2022 ರಂದು ರಾತ್ರಿ 10.00 ಪಿ.ಎಮ್. ಗಂಟೆಗೆ ಮನೆಯ ಮುಂದೆ ನಿಲ್ಲಿಸಿ ಮಲಗಿದ್ದು ಮುಂಜಾನೆ ಅಂದರೆ ದಿನಾಂಕ:25/11/2022 ರಂದು ಬೆಳಿಗ್ಗೆ 05.00 ಗಂಟೆಗೆ ಎದ್ದು ನೋಡಲು ಮೋಟಾರ ಸೈಕಲ್ ಇರುವುದಿಲ್ಲ ಹಿರೊ ಪ್ಯಾಶನ ಪ್ರೋ ಮೋಟಾರ ಸೈಕಲ್ ನಂ:KA39Q1076 ಅಂ.ಕಿ. ರೂ.50 ಸಾವಿರ ಬೆಲೆಬಾಳುವುದನ್ನು ದಿ:24/11/2022 ರಂದು ರಾತ್ರಿ 10.00 ಪಿ.ಎಮ್. ಗಂಟೆಯಿಂದ ದಿ:25/11/2022 ರಂದು ಬೆಳಿಗ್ಗೆ 05.00 ಅವಧಿಯಲ್ಲಿ ಕೊಡಂಬಲ ಗ್ರಾಮದ ಮನೆ ಎದುರು ನಿಲ್ಲಿಸಿದ್ದನ್ನು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಮಾರ್ಕೆಟ ಪೊಲೀಸ ಠಾಣೆ ಅಪರಾಧ ಸಂಖ್ಯೆ 95/2022 ಕಲಂ 279, 304 (ಎ) ಐಪಿಸಿ ಮತ್ತು 187 ಐಎಂವಿ ಎಕ್ಟ್ :-

ದಿನಾಂಕ 27-11-2022 ರಂದು 1530 ಗಂಟೆಗೆ ಫಿರ್ಯಾದಿ ಶ್ರೀ ಫೆರೋಜ ಖಾನ ತಂದೆ ಶಪಿ ಮಹ್ಮದ ಖಾನ ವಯ 36 ವರ್ಷ ಜಾತಿ ಮುಸ್ಲಿಂ ಉ;ವ್ಯಾಪಾರ ಸಾ:ಟಿಪ್ಪು ಸುಲ್ತಾನ ಕಾಲೋನಿ ಬೀದರ ರವರು ಠಾಣೆಗೆ ಹಾಜರಾಗಿ ತನ್ನ ಬಾಯಿ ಮಾತಿನ ಹೇಳಿಕೆ ಫಿರ್ಯಾದು ನೀಡಿದ್ದು ಸಾರಾಂಶವೇನAದರೆ, ದಿನಾಂಕ 27-11-2022 ರಂದು ದ್ವಿಚಕ್ರವಾಹನದ ಮೇಲೆ ತೆಲಂಗಾಣಾ ಬಾರ್ಡರ ಕಡೆಗೆ ಹೋಗಿ ಮರಳಿ ಬೀದರಕ್ಕೆ ಬರುವಾಗ ದೇವ ದೇವ ವನದ ಹತ್ತಿರ Ä 1500 ಗಂಟೆಯ ಸುಮಾರಿಗೆ ಬಂದಾಗ ಅಲ್ಲಿ ರೋಡಿನ ಎಡ ಬದಿಯಲ್ಲಿ ಒಬ್ಬ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದು ನೋಡಿ ಸಮೀಪ ಹೋಗಿ ನೋಡಲಾಗಿ, ಅವನ ಮೈ ಮೇಲೆ ಶರ್ಟ ಇರುವದಿಲ್ಲಾ ಅವನು ಒಂದು ನೀಳಿ ಬಣ್ಣದ ಜೀನ್ಸ ಪಾಯಿಂಟ ಮತ್ತು ಕೆಂಪು ಬಣ್ಣದ ಅಂಡರ ವಿಯರ ಧರಿಸಿದ್ದು ಇರುತ್ತದೆ. ಸದರಿ ಅಪರಿಚಿತ ವ್ಯಕ್ತಿಯ ಬಲಕೈ ಮೊಳಕೈ ಮುರಿದಿದ್ದು ಭಾರಿ ಗುಪ್ತಗಾಯವಾಗಿದ್ದು, ಅವನ ಬೆನ್ನಿನ ಮೇಲೆ ತರಚಿದ ರಕ್ತಗಾಯಗಳು ಇರುತ್ತವೆ. ಸದರಿ ಮೃತ ವ್ಯಕ್ತಿ ಅಪರಿಚಿತ ವ್ಯಕ್ತಿ ಇದ್ದು ಅವನ ವಯ ಅಂದಾಜು 40-45 ವರ್ಷ ವಯಸದವನು ಇರುತ್ತಾನೆ. ಮೃತ ಅಪರಿಚಿತ ವ್ಯಕ್ತಿ ಹುಚ್ಚನಂತೆ ಕಂಡು ಬರುತ್ತದೆ. ಸದರಿ ಘಟನೆ ಅಪರಿಚಿತ ವ್ಯಕ್ತಿಗೆ ದಿನಾಂಕ 26-11-2022 ರಂದು ಸಾಯಂಕಾಲ 1700 ಗಂಟೆಯಿAದ ದಿನಾಂಕ 27-11-2022 ರಂದು 1500 ಗಂಟೆಯ ಅವಧಿಯಲ್ಲಿ ಅಪರಿಚಿತ ವ್ಯಕ್ತಿ ರಸ್ತೆಯ ಮೇಲೆ ನಡೆದುಕೊಂಡು ಹೋಗುವಾಗ ಯಾವುದೊ ಅಪರಿಚಿತ ವಾಹನದ ಚಾಲಕನು ತನ್ನ ವಾಹನವನ್ನು ಅತಿವೇಗ ಹಾಗು ನಿಷ್ಕಾಳಜೀತನ ದಿಂದ ಚಲಾಯಿಸಿಕೊಂಡು ಬಂದು ಡಿಕ್ಕಿ ಮಾಡಿ ತನ್ನ ವಾಹನವನ್ನು ನಿಲ್ಲಿಸದೆ ಒಡಿಸಿಕೊಂಡು ಹೋಗಿದ್ದರಿಂದ ಸದರಿ ಅಪರಿಚಿತ ವ್ಯಕ್ತಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಮನ್ನಾಎಖೇಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 125/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ:27-11-2022 ರಂದು 16:20 ಗಂಟೆಗೆ ಸುದರ್ಶನರಡ್ಡಿ ಪಿ.ಎಸ್.ಐ (ಕಾ.ಸೂ) ಮನ್ನಾಎಖೇಳ್ಳಿ ಪೊಲೀಸ ಠಾಣೆಯಲ್ಲಿದ್ದಾಗ ಫೊನ್ ಮುಖಾಂತರ ಬಾತ್ಮೀ ಬಂದಿದ್ದೇನೆAದರೆ ಎನ್.ಎಚ್-65 ರೋಡ ತಾಳಮಡಗಿ ಗ್ರಾಮದ ಜೈಭವಾನಿ ಧಾಬಾದ ಹಿಂದುಗಡೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಅಂದರ ಬಾಹರ ಎಂಬ ನಸೀಬಿನ ಇಸ್ಪೇಟ್ ಜೂಜಾಟ ಆಡುತ್ತಿದ್ದಾರೆ. ಅಂತ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊAದಿಗೆ ತಾಳಮಡಗಿ ಗ್ರಾಮಕ್ಕೆ 16:55 ಗಂಟೆಗೆ ಹೋಗಿ ನೋಡಿದಾಗ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಹಣ ಪಣಕ್ಕೆ ಹಚ್ಚಿ ಅಂದರ ಬಾಹರ ಎಂಬ ನಸೀಬಿನ ಜೂಜಾಟ ಆಡುತ್ತಿರುವುದನ್ನು ನೋಡಿ ಖಚಿತಪಡಿಸಿಕೊಂಡು ದಾಳಿ ಮಾಡಿ ಪಂಚರ ಸಮಕ್ಷಮದಲ್ಲಿ ಹೆಸರು ವಿಳಾಸ ವಿಚಾರಿಸಲು ಅವರು ತಮ್ಮ

ಹೆಸರು 1] ಶರಣು ತಂದೆ ಬಸವರಾಜ ಚರಕಪಳ್ಳಿ ವಯ 28 ವರ್ಷ ಜಾತಿ:ಕುರುಬ ಉದ್ಯೋಗ: ಕೂಲಿ ಕೆಲಸ ಸಾ||ತಾಳಮಡಗಿ ಆತನ ಹತ್ತಿರ 290/- ರೂಪಾಯಿ ದೊರೆತವು, 2] ಶ್ರೀನಿವಾಸ ತಂದೆ ಅಶೋಕ ಸೇರಿಕಾರ ವಯ 28 ವರ್ಷ ಜಾತಿ:ಲಿಂಗಾಯತ ಉದ್ಯೋಗ: ಒಕ್ಕಲುತನ ಕೆಲಸ ಸಾ||ತಾಳಮಡಗಿ ಆತನ ಹತ್ತಿರ 600/- ರೂಪಾಯಿ ದೊರೆತವು 3] ಲಿಂಗರಾಜ ತಂದೆ ಕಾಶಿನಾಥ ಧಡಿಮಳ ವಯ 30 ವರ್ಷ ಜಾತಿ:ಲಿಂಗಾತಯ ಉದ್ಯೋಗ: ಖಾಸಗಿ ಕೆಲಸ ಸಾ|\ತಾಳಮಡಗಿ ಆತನ ಹತ್ತಿರ 2150/- ರೂಪಾಯಿ ದೊರೆತವು 4] ದಯಾನಂದ ತಂದೆ ಈರಪ್ಪಾ ಚೀನಕೇರಿ ವಯ 26 ವರ್ಷ ಜಾತಿ:ಕುರುಬ ಉದ್ಯೋಗ: ಕೂಲಿ ಕೆಲಸ ಸಾ|\ತಾಳಮಡಗಿ ಆತನ ಹತ್ತಿರ 2100/- ರೂಪಾಯಿ ದೊರೆತವು 5] ಕಮಲಾಕರ ತಂದೆ ಶಾಂತರಾಮ ಭಂಡಾರಿ ವಯ 33 ವರ್ಷ ಜಾತಿ:ತೆಲಂಗ ಉದ್ಯೋಗ: ವ್ಯಾಪಾರ ಸಾ||ಗಡವಂತಿ ಸಧ್ಯ: ಧನಕವಾಡಿ ಬಾಲಾಜಿ ನಗರ ಪುಣೆ ಆತನ ಹತ್ತಿರ 2500/- ರೂಪಾಯಿ ದೊರೆತವು ಹಾಗೂ ಎಲ್ಲಾರ ಮಧ್ಯದಲ್ಲಿ 850/- ರೂಪಾಯಿ ಮತ್ತು 52 ಇಸ್ಪೇಟ್ ಎಲೆಗಳು ದೊರೆತ್ತಿದ್ದು, ಒಟ್ಟು- 8490/- ರೂಪಾಯಿ ಮತ್ತು 52 ಇಸ್ಪೇಟ್ ಎಲೆಗಳನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.